# ಕಲ್ಪನೆ



ಹೊರೆಯನ್ನು ಸಿದ್ಧಮಾಡಿ ತಲೆಗೆ ಎತ್ತಿ ಇಡುತ್ತಿರುವ ಈ ಚಿತ್ರದಲ್ಲಿರುವ ಬಣ್ಣಗಳ ನಡುವೆಯೂ ಮಾತುಗಳಿವೆ ಎನಿಸುತ್ತಿದೆ. ಕವಿತೆಯ ಸಾಲುಗಳಿವೆ ಎಂದೂ, ನಿಟ್ಟುಸಿರು ಇದೆಯೆಂದೂ ಎನಿಸುತ್ತಿದೆಯೇ? ಯಾಕೆಂದರೆ ಹೊರೆಯನ್ನು ವರ್ಗಾಯಿಸುವ ಅವಕಾಶ ಎಲ್ಲರಿಗೂ ದೊರೆಯುವುದಿಲ್ಲ. ಹೊರೆಯನ್ನು ಸ್ವೀಕರಿಸುವವರೂ ಎಲ್ಲ ಕಡೆಯೂ ಕಾಣಸಿಗಲಾರರು. ಆದರೂ ಬದುಕಿನ ಚಕ್ರವನ್ನು ಮುನ್ನಡೆಸುವ ಸಲುವಾಗಿ ಭಾರವನ್ನು ಹೇಗಾದರೂ ನಿಭಾಯಿಸಲೇಬೇಕು. ಈ ಚಿತ್ರವನ್ನು ಗಮನಿಸಿದಾಗ ನಿಮ್ಮ ಮನಸ್ಸಿನಲ್ಲಿ ಕವಿತೆಯ ಸಾಲುಗಳು ಮೂಡಿದವೇ ? ಹಾಗಿದ್ದರೆ ಆ ಕವಿತೆಯನ್ನು ಬರೆದು ನೀವು ನಮಗೆ ಕಳುಹಿಸಿ. ನಿಮ್ಮ ಕಲ್ಪನೆಯ ಕವಿತೆ ಆಗಸ್ಟ್ 15ರ ಒಳಗೆ ನಮಗೆ ತಲುಪಬೇಕು.

---

ವಿಳಾಸ: ಕಲ್ಪನೆ ವಿಭಾಗ, ‘ಮಯೂರ’
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560001
ಇ–ಮೇಲ್: editormy@mayura.co.in